ಬ್ರಹ್ಮಾಂಡವದೆಲ್ಲ ರೋಮಕೂಪದೊಳಿರಲು

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 19.
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru, page No. 187.
3. **Note:** This song is not available in the books of Prof. S.K. Ramachandra Rao and also in the books of Sri. Pavanje Guru Rao and also in the books of Gorebala Hanumantha Rayaru.

ಬ್ರಹ್ಮಾಂಡವದೆಲ್ಲ ರೋಮಕೂಪದೊಳಿರಲು

ಅಮ್ಮಾ ಅಮ್ಮಾ ಎನುತ ಅಮ್ಮೆಯ ಬೇಡುತ್ತಿಹೆ

ಹೆಮ್ಮಕ್ಕಳು ನಗರೆ ಬ್ರಹ್ಮಾದಿಗಳು

ಮೊಮ್ಮಕ್ಕಳು ನಗರೆ ರುದ್ರಾದಿಗಳು

ಮರಿಮಕ್ಕಳು ನಗರೆ ಮಿಕ್ಕ ಸುರರೆಲ್ಲ

ರಮ್ಮೆಯರಸ ಸಿರಿ ಪುರಂದರ ವಿಠಲ

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:

ಇದೊಂದು ಪರಮಾತ್ಮನ ಮಹಿಮೆಯನ್ನು ಅಣಕಿಸಿ ಮಾತನಾಡಿದ ಉಗಾಭೋಗ.

ಹೆಮ್ಮಕ್ಕಳು = ಹಿರಿಯ ಮಕ್ಕಳು

ರೋಮ = ಕೂದಲು

ಕೂಪ = ಕೂದಲು ಹುಟ್ಟುವ ತಗ್ಗು ಜಾಗ

ಬ್ರಹ್ಮಾಂಡವದೆಲ್ಲ ರೋಮಕೂಪ ಎಂದರೆ - ಅದರ ಕಲ್ಪನೆ ಈ ರೀತಿಯಿದೆ:

ಅವ್ಯಾಕೃತ ಆಕಾಶದಲ್ಲಿರುವ ಪರಮಪುರುಷ ಕೂರ್ಮ, ಅದರ ಮೇಲ್ಗಡೆ ಲಕ್ಷ್ಮೀಕೂರ್ಮ, ಇದರ ಹೊರಗಡೆ ವಿಶಾಲವಾದ ಬ್ರಹ್ಮಾಂಡ, ಅದರ ಒಳಗಡೆ ಘನೋದಕ, ಇದರ ಮಧ್ಯಭಾಗದಲ್ಲಿ ವಿಷ್ಣುಕೂರ್ಮ, ಇದರ ಬಾಲದ ತುದಿಯಲ್ಲಿ, ಒಂದು ರೋಮಕೂಪದಲ್ಲಿ ವಾಯುಕೂರ್ಮ, ಇದರ ಬಾಲದ ತುದಿಯಲ್ಲಿ ಒಂದು ರೋಮಕೂಪದಲ್ಲಿ ಶೇಷದೇವರ ಹೆಡೆಯ ಮೇಲೆ ಸಾಸಿವೆ ಕಾಳಿನಷ್ಟಿರುವ ಬ್ರಹ್ಮಾಂಡ, ಇದರಲ್ಲಿರುವ ಭೂಲೋಕ. ಅದರಲ್ಲಿ ನಾವಿರುವ ಸ್ಥಳ. ಈ ರೀತಿಯಾಗಿ ನಮಗೆ ಭಗವಂತನ ಭವ್ಯ ರೂಪದ, ಅಘಾದತೆಯ ಅನುಸಂಧಾನವಿರಬೇಕು.

Classification: Ugabhoga
Ankita: purandara vittala
Location: NA
Category: Sankeerna
Sub-Category: brahmanda, udara, tayi, hengasu, makkalu, brahma, shiva, sura, nage, Lakshmi
Pravachana: NA
Explanation: NA